# ಶಾರ್ಕ್ ದವಡೆ





ಇದು ಮೆಗಾಲೊಡಾನ್ ಎಂಬ ಶಾರ್ಕ್‌ನ ದವಡೆ.

ಮೆಗಾಲೊಡಾನ್ ಶಾರ್ಕ್ ಈ ಭೂಮಿಯಿಂದ ಶಾಶ್ವತವಾಗಿ ಕಣ್ಮರೆಯಾಗಿ 15 ಲಕ್ಷ ವರ್ಷವಾಯಿತು. ಅದಕ್ಕೂ ಹಿಂದೆ ಸುಮಾರು 25 ಲಕ್ಷ ವರ್ಷಗಳಷ್ಟು ಕಾಲ ಅದು 'ಸಮುದ್ರದ ರಾಜ'ನಾಗಿ ಮೆರೆಯುತ್ತಿತ್ತು. ಅದರ ಉದ್ದ ಸುಮಾರು 16ರಿಂದ 20 ಮೀಟರ್. ಅಂದರೆ ನಮ್ಮ ಎರಡು ಸಿಟಿ ಬಸ್‌ಗಳಷ್ಟು ಉದ್ದ. 60–100 ಟನ್ ಭಾರದ ಈ ಭಾರಿ ಮೀನು ವ್ಹೇಲ್ಸ್ ಹಾಗೂ ಸಣ್ಣ ಶಾರ್ಕ್‌ಗಳನ್ನು ಅನಾಮತ್ತಾಗಿ ನುಂಗಿ ಬಿಡುತ್ತಿತ್ತು. ಸಮುದ್ರದಲ್ಲೇ ದೊಡ್ಡ ಗಾತ್ರದ ಜೀವಿಗಳಾಗಿರುವ ತಿಮಿಂಗಿಲಗಳನ್ನೂ ಈ ಮೆಗಾಲೊಡಾನ್ ತಿಂದು ತೇಗುತ್ತಿತ್ತು. ತಜ್ಞರ ಪ್ರಕಾರ, ಇಂತಹ ಜೀವಿಗಳ ದೊಡ್ಡ ಗಾತ್ರವೇ ಅವುಗಳ ನಿರ್ನಾಮಕ್ಕೂ ಕಾರಣವಂತೆ.

ಮೆಗಾಲೊಡಾನ್ ಶಾರ್ಕ್ 15 ಲಕ್ಷ ವರ್ಷಗಳಷ್ಟು ಹಿಂದೆ ಇದ್ದವು, ಅವು ಹೀಗೇ ಇದ್ದವು– ಎಂದೆಲ್ಲ ಈ 'ಹುಲು ಮಾನವ' ಗುರುತಿಸಿದ್ದಾದರೂ ಹೇಗೆ? ಕೆಲವು ನೂರು–ಸಾವಿರ ವರ್ಷಗಳ ಕಥೆಯನ್ನು ತನ್ನ ಪೂರ್ವಜರು ದಾಖಲಿಸಿದ ಇತಿಹಾಸದ ಪುಟಗಳಿಂದ ಆತ ತಿಳಿದುಕೊಂಡಿದ್ದಾನೆ. ಲಕ್ಷಾಂತರ ವರ್ಷಗಳ ಪ್ರಾಣಿ, ಪಕ್ಷಿ, ಸಸ್ಯ ಹಾಗೂ ಪ್ರಕೃತಿಯ ರಹಸ್ಯಗಳನ್ನು ದಾಖಲಿಸಲು ಪ್ರಕೃತಿಯಲ್ಲೇ ಒಂದು ವ್ಯವಸ್ಥೆ ಇದೆ. ಆ ವ್ಯವಸ್ಥೆಗೆ 'ಪಳೆಯುಳಿಕೆಗಳು' ಎನ್ನುತ್ತಾರೆ.

ಪ್ರತಿ ವರ್ಷವೂ ಮಳೆಯಾಗುತ್ತದೆ. ಭೂಮಿಯ ಮೇಲಿನ ಮಣ್ಣು ನೀರಿನೊಂದಿಗೆ ಹರಿದುಕೊಂಡು ಹೊಳೆ, ಹಳ್ಳ, ನದಿಗಳ ಮೂಲಕ ಸಮುದ್ರವನ್ನು ಸೇರುತ್ತದೆ. ಅದರ ಜೊತೆಗೆ ಭೂಮಿಯ ಮೇಲಿನ ಕೆಲವು ಸಸ್ಯ, ಪ್ರಾಣಿ, ಜೀವಿಗಳು ಸತ್ತು, ಸಮುದ್ರದ ತಳ ಸೇರುತ್ತವೆ. ಆ ಮೂಲಕ, 'ನಾವು ಹಿಂದೆ ಈ ಭೂಮಿಯ ಮೇಲೆ ಹೀಗೇ ಇದ್ದೆವು' ಎಂಬುದನ್ನು ದಾಖಲಿಸಲು ಪಳೆಯುಳಿಕೆಗಳಾಗಿ ಉಳಿದು ಬಿಡುತ್ತವೆ. ಪ್ರತಿ ವರ್ಷ ಹರಿದು ಸಂಗ್ರಹವಾಗುವ ಮಣ್ಣಿನ ಆಧಾರದ ಮೇಲೆ ಯಾವ ಯಾವ ಕಾಲದಲ್ಲಿ ಎಂತೆಂತಹ ಜೀವಿಗಳು ಇದ್ದವು ಎಂಬುದನ್ನು ಲೆಕ್ಕ ಹಾಕಬಹುದು. 'ಪ್ರಕೃತಿಯ ಈ ದಾಖಲೆ, ಇತಿಹಾಸದ ದಾಖಲೆಗಳಿಗಿಂತಲೂ ನಿಖರ' ಎನ್ನುತ್ತಾರೆ ತಜ್ಞರು.

ವಿಟೊ ಬೆರ್ಟುಸಿ ಎಂಬ ಹವ್ಯಾಸಿ ಪಳೆಯುಳಿಕೆಗಳ ಬೇಟೆಗಾರ ಸುಮಾರು 20 ವರ್ಷಗಳ ಕಾಲ ಸತತವಾಗಿ ಹುಡುಕಾಟ ನಡೆಸಿ, ಮೆಗಾಲೊಡಾನ್ ಶಾರ್ಕ್ ಮೀನಿನ ಈ ದವಡೆಯನ್ನು ಬಿಡಿಬಿಡಿಯಾಗಿ ಪತ್ತೆ ಮಾಡಿ, ಇಡಿಯಾಗಿ ಕಟ್ಟಿ ನಿಲ್ಲಿಸಿದ್ದಾನೆ. ಇದರ ಮೇಲ್ದವಡೆ ಹಾಗೂ ಕೆಳದವಡೆಗಳ ಮಧ್ಯದ ಅಂತರ 9 ಅಡಿ. ಮೂಲೆಯಿಂದ ಮೂಲೆಗೆ 11 ಅಡಿ. ಈ ದವಡೆಯಲ್ಲಿ ಒಟ್ಟು 182 ವಿವಿಧ ಗಾತ್ರದ ಹಲ್ಲುಗಳಿವೆ. ಇಲ್ಲಿನ 4 ಹಲ್ಲುಗಳಂತೂ 7 ಅಂಗುಲಕ್ಕಿಂತ ಉದ್ದವಾಗಿವೆ.



ಮೆಗಾಲೊಡಾನ್ ಎಂಬುದು ಗ್ರೀಕ್ ಶಬ್ದ. ಇದು ದೊಡ್ಡ ಹಲ್ಲು ಎಂಬ ಅರ್ಥವನ್ನು ಹೊಂದಿದೆ. ಈ ಹಲ್ಲುಗಳಿಗೆ ಈಗ ಅಪಾರವಾದ ಬೆಲೆಯಿದೆ. ಈ ಹಲ್ಲುಗಳನ್ನು ಚಿನ್ನದ ಸರದಲ್ಲಿ ಎರಕ ಹೊಯ್ದು ಕೊರಳಲ್ಲಿ ಹಾಕಿಕೊಳ್ಳುತ್ತಾರೆ. ಮೆಗಾಲೊಡಾನ್ ಶಾರ್ಕ್‌ನ ಒಂದೊಂದು ದಂತಕ್ಕೇನೇ ಮಾರುಕಟ್ಟೆಯಲ್ಲಿ ಹತ್ತರಿಂದ ಹದಿನೈದು ಸಾವಿರ ಡಾಲರ್‌ನಷ್ಟು ಬೆಲೆ ಇದೆ.

ಈ ಬೃಹತ್ ದವಡೆಯ ಬಿಡಿ ಭಾಗಗಳನ್ನು ಸಂಗ್ರಹಿಸಲು ವಿಟೊ, ಅದೆಷ್ಟು ಬಾರಿ ದಕ್ಷಿಣ ಕೆರೋಲಿನಾ ಹಾಗೂ ಜಾರ್ಜಿಯಾ ನದಿಗಳಲ್ಲಿ ಮುಳುಗಿದ್ದಾನೋ ಗೊತ್ತಿಲ್ಲ! 2004ರಲ್ಲಿ ಮೆಗಾಲೊಡಾನ್ ದವಡೆಗಳ ಹಲ್ಲಿನ ಪಳೆಯುಳಿಕೆಗಳ ಶೋಧನೆಗಾಗಿ ನೀರಿನಲ್ಲಿ ಮುಳುಗಿದಾಗಲೇ ಆತನಿಗೆ ಆಕಸ್ಮಿಕ ಸಾವು ಸಂಭವಿಸಿತು. ಆಗ ಆತನಿಗೆ 47 ವರ್ಷ. ಆತನ ಕಾರ್ಯವನ್ನು ಅದೇ ಉತ್ಸಾಹದಿಂದ ಮುಂದುವರೆಸಿ ಪೂರ್ಣಗೊಳಿಸಿದ್ದು ಆತನ ತಮ್ಮ ಜೋಸೆಫ್ ಬೆರ್ಟುಸಿ. ಈಗ ಮೆಗಾಲೊಡಾನ್ ಶಾರ್ಕ್‌ನ ದವಡೆ ಕಟ್ಟುವ ಕಾರ್ಯ ಪೂರ್ಣಗೊಂಡಿದ್ದು, ಪ್ರಾಗೈತಿಹಾಸಿಕವಾದ ಅಪೂರ್ವ ದಾಖಲೆಯೊಂದು ಮರುಸೃಷ್ಟಿಯಾಗಿದೆ.

'ಇದು ವಿಟೊನ ಅಮೂಲ್ಯ ಆಸ್ತಿ. ಇದಕ್ಕಾಗಿ ಆತ ತನ್ನ ಇಡೀ ಜೀವನವನ್ನೇ ಮುಡುಪಾಗಿಟ್ಟಿದ್ದ. ಅತ್ಯಂತ ಪ್ರೀತಿ ಹಾಗೂ ಮುತುವರ್ಜಿಯಿಂದ ಈ ಮೆಗಾಲೊಡಾನ್ ದವಡೆಯನ್ನು ಆತ ಕಟ್ಟಿ ನಿಲ್ಲಿಸಿದ್ದಾನೆ' ಎಂದು ಜೋಸೆಫ್ ಬೆರ್ಟುಸಿ ಹೃದಯ ತುಂಬಿ ಹೇಳುತ್ತಾನೆ. ಅಂದ ಹಾಗೆ, ಈಗ ಇದಕ್ಕೆ ಭಾರೀ ಬೆಲೆ. ಮೌಲ್ಯ ಬಲ್ಲವರು 7 ಲಕ್ಷ ಡಾಲರ್‌ಗಳಿಗೆ ಅದನ್ನು ಖರೀದಿಸಬಹುದು ಎನ್ನುತ್ತಾನೆ ಜೋಸೆಫ್.

■ ಸುಭಾಸ ಯಾದವಾಡ